## ಯೋಗ ತರಗತಿ ಮಾಹಿತಿ

ಯೋಗಪ್ರಿಯರಿಗೊಂದು ಸಿಹಿಸುದ್ದಿ. ಎಲ್ಲೆಲ್ಲಿ ಯೋಗ ತರಗತಿಗಳು ನಡೆಯುತ್ತವೆ ಎಂಬುದನ್ನು ತಿಳಿಸಲು ಐಫೋನ್ ಅಪ್ಲಿಕೇಶನ್ ನೆರವಿಗೆ ಬಂದಿದೆ. 'ಓಂ ಲವರ್ಸ್' ಫೋನ್ ಬಳಕೆದಾರರಿರುವ ಸ್ಥಳವನ್ನು ಪತ್ತೆ ಮಾಡಿ, ಸಮೀಪ ಇರುವ ಯೋಗ ತರಗತಿಗಳ ಬಗ್ಗೆ ಮಾಹಿತಿ ತಿಳಿಸುತ್ತದೆ. ಜೊತೆಗೆ ಅಲ್ಲಿಗೆ ಸೇರುವ ಮಾರ್ಗಗಳ ವಿವರವನ್ನೂ ನಿಮ್ಮ ಮುಂದಿಡುತ್ತದೆ. ಇದನ್ನು ವ್ಯಾಂಕೋವರ್‌ನಲ್ಲಿರುವ ಯೋಗ ಅಪರಲ್ ಕಂಪೆನಿ ರೂಪಿಸಿದೆ.

63 ದೇಶಗಳಲ್ಲಿರುವ 7000 ಯೋಗ ತರಗತಿಗಳನ್ನು ಈ ಅಪ್ಲಿಕೇಶನ್‌ನಿಂದ ಹುಡುಕಲು ಸಾಧ್ಯ. ಹಠ, ಪವರ್‌ಫ್ಲೋ, ವಿನ್ಯಾಸ ಹಾಗೂ ಹಾಟ್ ಯೋಗ ಎಂದು ವಿಭಾಗಗಳನ್ನು ಮಾಡಲಾಗಿದೆ. ಈ ಅಪ್ಲಿಕೇಶನ್‌ನಿಂದಲೇ ಸ್ನೇಹಿತರಿಗೆ ಇ– ಮೇಲ್, ಸಂದೇಶವನ್ನು ಕಳಿಸಬಹುದು. ಟ್ವೀಟ್ ಮಾಡಿ, ಫೇಸ್‌ಬುಕ್ ಮೂಲಕವೂ ಸಂಪರ್ಕಿಸಬಹುದು.






## ಆಫೀಸ್ ಸ್ಯೂಟ್ 7.1

ಈ ಅಪ್ಲಿಕೇಶನ್ ಸ್ಯಾಮ್‌ಸಂಗ್ ಗ್ಯಾಲಕ್ಸಿಯಂತಹ ಮಲ್ಟಿ ವಿಂಡೊ ಸಾಧನಗಳಲ್ಲಿ ಲಭ್ಯ. ಇದು ಎರಡು ಸ್ಕ್ರೀನ್‌ಗಳನ್ನು ಬೆಂಬಲಿಸುತ್ತದೆ. ವರ್ಡ್ ಡಾಕ್ಯುಮೆಂಟ್ ಮೂಲಕ ಗೂಗ್ಲ್ ಹುಡುಕಾಟ ನಡೆಸಬಹುದು. ಚಿತ್ರಗಳನ್ನು ಕ್ಯಾಮೆರಾ ಮೂಲಕ ಡಾಕ್ಯುಮೆಂಟ್‌ನಲ್ಲಿ ಅಂಟಿಸಬಹುದು. ಜೊತೆಗೆ ಆಕ್ಸ್‌ಫರ್ಡ್ ನಿಘಂಟು, ಪವರ್ ಪಾಯಿಂಟ್‌ನಲ್ಲಿ ಶ್ಯಾಡೊವನ್ನು ಕೂಡಾ ಬೆಂಬಲಿಸುತ್ತದೆ.

## ಖಾಸಗಿ ಬ್ರೌಸಿಂಗ್




ಹೊಸ 'ಫೈರ್‌ಫಾಕ್ಸ್ 20' ಡೆಸ್ಕ್‌ಟಾಪ್ ಮತ್ತು ಆ್ಯಂಡ್ರಾಯ್ಡ್‌ನಲ್ಲಿ ಖಾಸಗಿ ಬ್ರೌಸಿಂಗ್ ಸೌಲಭ್ಯ ಒದಗಿಸುವ ಸಾಮರ್ಥ್ಯ ಹೊಂದಿದೆ. ಅಂದರೆ ನೀವು ಬ್ರೌಸ್ ಮಾಡಿದ ಸಮಯ, ನೋಡಿದ ಅಂತರ್‌ಜಾಲ ತಾಣಗಳ ಮಾಹಿತಿ ಮೊದಲಾದವು ಲಭ್ಯವಾಗುವುದಿಲ್ಲ. ಹೀಗಾಗಿ ಈ ಹೊಸ ಡೌನ್‌ಲೋಡ್ ಮ್ಯಾನೇಜರ್‌ಗೆ 'ಪೋರ್ನ್ ಮೋಡ್' ಎಂಬ ಹೆಸರೂ ಚಾಲ್ತಿಯಲ್ಲಿದೆ.

ಈ ಫೈರ್‌ಫಾಕ್ಸ್‌ನಿಂದ ಈ ಮೊದಲಿದ್ದ ಸ್ಟ್ಯಾಂಡರ್ಡ್ ವಿಂಡೊ ಜೊತೆಯಲ್ಲೇ ಖಾಸಗಿ ವಿಂಡೊ ಬ್ರೌಸಿಂಗ್ ಅನ್ನೂ ಮಾಡಬಹುದು. ಹಾಗೆಯೇ ಸ್ಟ್ಯಾಂಡರ್ಡ್ ಟ್ಯಾಬ್ ಪಕ್ಕದಲ್ಲೇ ಖಾಸಗಿ ಟ್ಯಾಬ್ ಓಡುತ್ತಿರುತ್ತದೆ. ನೀವು ಬ್ರೌಸ್ ಮಾಡಿದ 45 ಸೆಕೆಂಡ್‌ಗಳಲ್ಲೇ ಕುಕೀಸ್, ಹಿಸ್ಟರಿ, ತಾತ್ಕಾಲಿಕ ಫೈಲ್‌ಗಳನ್ನು ಅಳಿಸಿ ಹಾಕುತ್ತದೆ.

ಇದು 'ಗೆಟ್‌ಯೂಸರ್‌ಮೀಡಿಯ' ಅಪ್ಲಿಕೇಶನ್ ಅನ್ನು ಕೂಡಾ ಬೆಂಬಲಿಸುತ್ತದೆ. ಈ ಅಪ್ಲಿಕೇಶನ್‌ನಿಂದ ನಿಮ್ಮ ವೆಬ್‌ಕ್ಯಾಮ್‌ನಿಂದ ರೆಕಾರ್ಡ್ ಮಾಡಬಹುದು. ವೆಬ್ ರಿಯಲ್– ಟೈಮ್ ಕಮ್ಯುನಿಕೇಶನ್‌ಗೆ ಸಂಪರ್ಕ ಕಲ್ಪಿಸಿ ಆ ಮೂಲಕ ವೈಸ್ ಕಾಲಿಂಗ್, ವಿಡಿಯೊ ಚ್ಯಾಟ್ ಮೊದಲಾದವುಗಳಿಗೆ ಅನುಕೂಲ ಮಾಡಿಕೊಡುತ್ತದೆ.

## ಫೇಸ್‌ಬುಕ್ 'ಹೋಂ' ಅಪ್ಲಿಕೇಶನ್




ಸ್ಮಾರ್ಟ್‌ಫೋನ್ ಹೊಂದಿರುವವರು ಸಾಮಾಜಿಕ ಜಾಲತಾಣ ಫೇಸ್‌ಬುಕ್‌ಗೆ ಅಂಟಿಕೊಂಡಿರುವಂತೆ ಮಾಡಲು 'ಹೋಂ' ಎಂಬ ಅಪ್ಲಿಕೇಶನ್‌ಗಳ ಸಮೂಹವನ್ನೇ ಬಿಡುಗಡೆ ಮಾಡಿದೆ. ಈ 'ಹೋಂ'ನಿಂದ ಫೋನ್‌ನ ಸ್ಕ್ರೀನ್ ನಿಚ್ಚಳವಾಗಿ ಕಾಣುವುದಲ್ಲದೇ, ಸುದ್ದಿಯನ್ನು ಸ್ವೈಪ್ ಮಾಡುವುದರ ಮೂಲಕ ನೋಡಬಹುದು. ಸಂದೇಶವನ್ನು 'ಚ್ಯಾಟ್ ಹೆಡ್ಸ್' ಸೌಲಭ್ಯ ಬಳಸಿ ಸ್ನೇಹಿತರ ಚಿತ್ರಗಳ ಜೊತೆ ಕಳಿಸಬಹುದು. ಈ ಅಪ್ಲಿಕೇಶನ್ ಅನ್ನು ಈಗಾಗಲೇ ಸೀಮಿತ ಆ್ಯಂಡ್ರಾಯ್ಡ್ ಫೋನ್‌ಗಳಿಗೆ ಡೌನ್ ಲೋಡ್ ಮಾಡಲಾಗಿದೆ. ಆದರೆ ಅಪ್ಲಿಕೇಶನ್ ಅನ್ನು ಮೊದಲೇ ಅಳವಡಿಸಿದ ಎಚ್‌ಟಿಸಿ ಫೋನ್ ಅನ್ನು ಮಾರುಕಟ್ಟೆಗೂ ಬಿಡಲಾಗಿದೆ.

■ ಎಸ್. ತುಂಬೆ